‘ಛೆ... ಏನು ಹೇಳ್ತಾ ಇದ್ದೀಯ’ ಸುರುವಣ್ಣ ಹೇಳಿದ, ‘ಮದ್ಯ ವಿಷ ಕಣೋ. ಅದನ್ನು ಉತ್ಪಾದನೆ ಮಾಡೋದು, ಮಾರೋದು, ಕುಡಿಯೋದು ಎಲ್ಲಾ ತಪ್ಪು.’

ಅದನ್ನು ಹೇಳುವಾಗ ಸುರುವಣ್ಣನ ಮುಖದಲ್ಲಿ ಒಬ್ಬ ಸನ್ಯಾಸಿಯ ಭಾವ ಇಣುಕುತ್ತಿತ್ತು. ಸುರುವಣ್ಣನ ಆಪ್ತವಾಕ್ಯವಾಗಿತ್ತು ಅದೆಂದು ನಾನಂದುಕೊಂಡೆ. ತುಂಬಾ ದಿನಗಳ ನಂತರ ಅದು ನಾರಾಯಣ ಗುರುವಿನ ಸಂದೇಶವೆಂದು ತಿಳಿಯಿತು.

ಸುರುವಣ್ಣ ನನಗೆ ಹೇಳಿದ, ‘ನೀನು ಹೀಗೆ ಹತ್ತನೆಯ ತರಗತಿಗೆ ಓದು ಮುಗಿಸಿ ಆಟ, ಕುಸ್ತಿ ಅಂತೆಲ್ಲಾ ಓಡಾಡಿದರೆ ಸಾಲದು. ಯಾವುದಾದರೂ ಕೋರ್ಸ್‌ಗೆ ಸೇರ್ಕೋ. ಪ್ರೈವೇಟಾಗಿ ಕಲಿಯಲು ಹಲವಾರು ಕೋರ್ಸ್‌ಗಳಿವೆ.’

ಹಾಗೆ ನಾನು ಒಬ್ಬ ವಿದ್ಯಾವಂತನೆನಿಸಿಕೊಂಡೆ. ಇಂಗ್ಲಿಷ್ ಹೇಳಿಕೊಡಲು ಸುರುವಣ್ಣನಿದ್ದ. ಮಲಯಾಳಂಗೆ ಸಹಾಯಹಸ್ತ ನೀಡಿದ್ದು ಗಾಂಧಿ ಮೆಮೋರಿಯಲ್ ವಾಚನಾಲಯ. ನಾನು ಹೀಗೆ ಪದವೀಧರನಾದೆನೆಂದು ನನಗೆ ಮಾತ್ರ ತಿಳಿದಿತ್ತು. ಎಲ್ಲವೂ ಒಂದು ಆಕಸ್ಮಿಕವೆಂದೇ ಹೇಳಬಹುದು.

ಸುರುವಣ್ಣನಿಗೆ ಕೆಲಸ ಸಿಕ್ಕಿ ಹೈದರಾಬಾದ್‌ಗೆ ಹೋದ. ಆಗ ನಾನು ರಾಜಕೀಯದಲ್ಲಿ ಕ್ರಿಯಾಶೀಲನಾದೆ. ಮಳೆ ಬಿಸಿಲನ್ನು ಲೆಕ್ಕಿಸದೆ ಘೋಷಣೆಗಳನ್ನು ಕೂಗುತ್ತ, ಮೆರವಣಿಗೆಯಲ್ಲಿ ಸಾಗುತ್ತಾ ಐದು, ಹತ್ತು ಮೈಲಿಗಳಷ್ಟು ದೂರ ಪಾದಯಾತ್ರೆ ಮಾಡಿ ಸಂಘಟನೆಯ ಬಲವನ್ನು ವೃದ್ಧಿಸುವಂತೆ ನೋಡಿಕೊಂಡೆ. ನಡುವೆ ಸಮಾಧಾನಕರ ಅಂಶವೊಂದಿದೆ. ದಕ್ಷಿಣ ಕೇರಳದ ಒಂದಷ್ಟು ಮೇಷ್ಟ್ರುಗಳು ತಂಗುವ ಲಾಡ್ಜೊಂದಿದೆ. ಅದರ ಕೆಳಕ್ಕೆ ರೇಷನ್ ಅಂಗಡಿಯಿದೆ. ಮೇಲೆ ಎರಡು ಕೋಣೆಗಳು ಹಾಗೂ ಒಂದು ವಿಶಾಲವಾದ ವರಾಂಡ. ದಕ್ಷಿಣದವರಾದ ಶಿವರಾಮ ಮೇಷ್ಟ್ರಲ್ಲೊಂದು ಹಳೆಯ ಹಾರ್ಮೋನಿಯಂ ಪೆಟ್ಟಿಗೆಯಿದೆ. ಅದರ ಮೇಲೆ ಬೆರಳುಗಳನ್ನಾಡಿಸಿ ಅವರು ಶ್ರುತಿ ಹಾಕುತ್ತಾರೆ. ಆಗ ಉತ್ತರ ಕೇರಳದವರಾದ ಆನೆ ಬಲರಾಮಣ್ಣ ಕೊಳಲು ತೆಗೆದುಕೊಂಡು ಲಾಡ್ಜ್‌ಗೆ ಬರುತ್ತಾರೆ. ಹಾರ್ಮೋನಿಯಂ, ಕೊಳಲು ಒಟ್ಟಾದಾಗ ಸಿಟಿಯಿಂದ ಅಂಗಡಿಯನ್ನು ಮುಚ್ಚಿ ಟೈಲರ್ ಆಂಡಿಮೇಸ್ತ್ರಿ ಐದು ಬ್ಯಾಟರಿಗಳಿರುವ ಟಾರ್ಚ್‌ನ ಬೆಳಕನ್ನು ಚೆಲ್ಲುತ್ತಾ ನಡೆದು ಬರುತ್ತಾರೆ. ಐದು ಬ್ಯಾಟರಿಗಳಿರುವ ಟಾರ್ಚ್‌ನ ಬೆಳಕೆಲ್ಲವೂ ಹರಿದು ಬಂದು ಲಾಡ್ಜ್‌ನ ಕೋಣೆಗಳನ್ನು ಪ್ರಕಾಶಮಾನವನ್ನಾಗಿ ಮಾಡುವಾಗ ಶಿವರಾಮನ್ ಮೇಷ್ಟ್ರು ಹಾರ್ಮೋನಿಯಂನಿಂದ ಕೈ ತೆಗೆದು ಚಪ್ಪಾಳೆ ತಟ್ಟುತ್ತಾರೆ.

ಆಂಡಿ ಮೇಸ್ತ್ರಿ ಸಂಜೆ ಏಳೂವರೆಯವರೆಗೆ ಟೈಲರ್. ಏಳೂವರೆಯಿಂದ ಎಂಟರವರೆಗೆ ಕಳ್ಳುಕುಡುಕ ಆಂಡಿ. ಕಳ್ಳುಶಾಪಿನಲ್ಲಿ ಎರಡು ಬಾಟಲಿ ಸೇಂದಿ, ಫ್ರೈ ಮಾಡಿದ ಹೋಳೆಮೀನು ಮೆಣಸಿನ ಚಮ್ಮಂದಿ (ಚಟ್ನಿ) ಯನ್ನು ಮೆದ್ದು ಮನೆಯತ್ತ ನಡೆಯುತ್ತಾರೆ. ಕುಡಿದ ಅಮಲಿನಲ್ಲಿ ಆಂಡಿ ದಾರಿಯಲ್ಲಿ ಕಂಡವರನ್ನೆಲ್ಲಾ ಬೈಯುತ್ತಲೇ ಹೆಜ್ಜೆ ಹಾಕುತ್ತಾರೆ. ಆದರೆ ದಕ್ಷಿಣದ ಮೇಷ್ಟ್ರುಗಳ ಲಾಡ್ಜ್‌ನ ಕೋಣೆ ತಲುಪಿದ ಕೂಡಲೇ ಆಂಡಿ ಬದಲಾಗುತ್ತಾರೆ. ಎಂಟೂವರೆಗೆ ಲಾಡ್ಜ್ ತಲುಪಿದ ನಂತರ ಆಂಡಿ ಭಾಗವತನಾಗುತ್ತಾನೆ. ಅನಂತರ ಲಾಡ್ಜ್ ಸಂಗೀತಮಯವಾಗುತ್ತದೆ.

ಆಂಡಿಯಣ್ಣನ ವಿಲಾಪಗಾನ ಕೇಳಿದರೆ ಎಂತವರ ಕಣ್ಣಲ್ಲೂ ನೀರು ಉಕ್ಕುತ್ತದೆ. ‘ಆಂಡಿಯಣ್ಣಾ..... ಆತ್ಮವಿದ್ಯಾಲಯ...’ ಎಂದು ಯಾರಾದರೂ ಹೇಳುವುದೇ ತಡ ಅವರು ಚುರುಕಾಗುತ್ತಾರೆ. ಶಿವರಾಮ ಮೇಷ್ಟ್ರ ಕಡೆ ಒಮ್ಮೆ ನೋಡಿ ಕಣ್ಮುಚ್ಚುತ್ತಾರೆ. ಮೇಷ್ಟ್ರು ಹಾರ್ಮೋನಿಯಂನಲ್ಲಿ ನಿಧಾನವಾಗಿ ಶ್ರುತಿ ಮೀಟುತ್ತಾರೆ. ಅಷ್ಟರಲ್ಲಿ ಬಲರಾಮಣ್ಣ ತನ್ನ ಸರದಿಗಾಗಿ ಕಾಯುತ್ತಿರುತ್ತಾರೆ. ಅವರು ಕೊಳಲನ್ನು ತುಟಿಗಳಿಗಿಟ್ಟು ಉಸಿರನ್ನು ಬಿಗಿಹಿಡಿದು ಕುಳಿತಿರುತ್ತಾರೆ. ಆತ್ಮದ ತಳದಿಂದ ಆಂಡಿಯಣ್ಣ ಹಾಡನ್ನು ಎತ್ತಿ ಹಾಡತೊಡಗುತ್ತಾರೆ.

ನಾವು ಕಿರಿಯರ, ಒಂದು ಗುಂಪು ಬೆಕ್ಕಿನಂತೆ ಮುದುಡಿ ಕುಳಿತುಕೊಳ್ಳುತ್ತಿದ್ದೆವು. ಒಂದು ಎಲೆ ಬಿದ್ದರೆ ಸಾಕು ಆಂಡಿಯಣ್ಣನಿಗೆ ಕೋಪಬಂದು ಬಿಡುತ್ತಿತ್ತು. ಯಾರಾದರೂ ಸದ್ದು ಮಾಡಿದರೆ ಐದು ಬ್ಯಾಟರಿಯ ಟಾರ್ಚ್‌ನಿಂದ ಹೊಡೆಯುತ್ತಿದ್ದರು.

ಆಂಡಿಯಣ್ಣ ಕಮುಕರ (ಮಲಯಾಳಂನ ಖ್ಯಾತ ಹಿನ್ನೆಲೆ ಗಾಯಕ) ಅವರ ಹಾಡು ಹಾಡಿದರೆ ಅವರದ್ದೇ ಧ್ವನಿಯೆನಿಸುತ್ತದೆ. ಅಂತಹ ಅನೇಕ ಗಾಯಕರ ಹಾಡುಗಳನ್ನು ಅನುಕರಿಸುತ್ತಿದ್ದರು. ತಬಲಾದ ಕೊರತೆ ಮಾತ್ರ ಇರುತ್ತಿತ್ತು. ಆದರೆ ವಾರಕ್ಕೊಮ್ಮೆ ರಜೆಯಲ್ಲಿ ಬರುವ ಪಿ.ಡಬ್ಲ್ಯು. ಡಿಯ ನಾಲ್ಕನೆಯ ದರ್ಜೆ ನೌಕರನಾದ ದೇವ ಸೇರಿಕೊಂಡರೆ ಅದಕ್ಕೂ ಪರಿಹಾರ ಲಭ್ಯ. ಆಫೀಸಿನಲ್ಲಿ ದೇವನಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಆದರೆ ವೇದಿಕೆಯಲ್ಲಿ ಅವನು ಉಸ್ತಾದ್. ಗಾನಮೇಳಕ್ಕೆ ಕರೆಯುವವರಿಗೆ ದೇವ ಹೇಳುತ್ತಾನೆ, ನೋಟೀಸಿನಲ್ಲಿ ಉಸ್ತಾದ್ ಎಂದಿರಬೇಕು. ಹೆಸರು ಹಾಗಿಲ್ಲವೆಂದಾದರೆ ದೇವ ಅಸುರನಾಗುತ್ತಾನೆ.

ಮೇಳ ಮುಗಿಯಿತೆಂದು ಘೋಷಿಸಿದ ಮೇಲೆ ಆಂಡಿಯಣ್ಣ ಒಂದು ನಿಮಿಷ ಕೂಡ ಅಲ್ಲಿರುವುದಿಲ್ಲ. ಟವೆಲು ತೆಗೆದು ತಲೆಗೆ ಕಟ್ಟುತ್ತಾರೆ... ಮುಂಡಾಸಿನಂತೆ. ಪಂಚೆಯನ್ನು ಎತ್ತಿಕಟ್ಟಿ, ಐದು ಬ್ಯಾಟರಿಯ ಟಾರ್ಚನ್ನು ಕಂಕುಳಲ್ಲಿ ಸಿಗಿಸಿ ನಡೆಯುತ್ತಾರೆ. ಮನೆಗಿರುವ ಲೊಟ್ಟ ಲೊಡಸುಗಳನ್ನೆಲ್ಲಾ ತುಂಬಿ ಬಟ್ಟೆ ಬೇಗಿನೊಂದಿಗೆ ರಸ್ತೆಯವರೆಗೆ ಯಾರಾದರೂ ಹೋಗಿ ಬಿಟ್ಟು ಬರುತ್ತಾರೆ.

‘ಸೋಜಾ... ಸೋಜಾ... ರಾಜಕುಮಾರಿ... ಸೋಜಾ’ ಎಂದು ಗುನುಗುತ್ತಾ ಮೇಸ್ತ್ರಿ, ಹಗ್ಗವನ್ನು ಹಿಡಿದು ಏಣಿಮೆಟ್ಟಿಲುಗಳನ್ನು ಇಳಿಯುತ್ತಾರೆ. ನಿದ್ರಿಸದ ರಾಜಕುಮಾರಿ ಆಂಡಿಯಣ್ಣನನ್ನು ಕರೆದುಕೊಂಡು ದೂರವಾದಾಗ ತಲುಪುವಾಗ ಬಲರಾಮಣ್ಣನ ತನಿಯಾವರ್ತನ ಆರಂಭಿಸಲಾಗುತ್ತದೆ. ಕೊಳಲಿನ ರಾಗಭೇದಗಳು ಹಳ್ಳಿಯ ವಾತಾವರಣದಲ್ಲಿ ಗಂಟೆಗಳಷ್ಟು ಸಮಯ ಅಲೆದಾಡುತ್ತದೆ. ದಕ್ಷಿಣದ ಇತರೆ ಮೇಷ್ಟ್ರುಗಳು ಊಟಮಾಡಿ ಮುಗಿಸಿ ನಿದ್ದೆಗೆ ಜಾರಿರುತ್ತಾರೆ. ಶಿವರಾಮ ಮೇಷ್ಟ್ರ ಅನ್ನ, ಸಾಂಬಾರು ಮಾತ್ರ ಇನಾಮಲ್ ಹಚ್ಚಿದ ಕಬ್ಬಿಣದ ಪ್ಲೇಟಿನಲ್ಲಿ ತಣ್ಣಗಾಗಿ ಮರಗಟ್ಟಿರುತ್ತದೆ.

ಮಾವನ ಮನೆಯ ಅಂಗಳಕ್ಕೆ ತಲುಪಿದಾಗಲೂ ಬೆಟ್ಟದಬದಿಯ ತಂಪಿಗೆ ತೆರೆಯುವ ನನ್ನ ಕಿಟಕಿಯ ಬಳಿಗೆ ತಲುಪಿದಾಗಲೂ ಬಲರಾಮಣ್ಣನ ಮುರಳೀಗಾನದ ಧ್ವನಿ ತೇಲಿಬರುತ್ತಿರುತ್ತದೆ. ನಾನು ನಾನಾಗಿದ್ದಕ್ಕೆ ಕಾರಣ ಈ ಹಳ್ಳಿ, ವಾಚನಾಲಯ, ಪ್ರಕೃತಿ ಹಾಗೂ ಸ್ನೇಹ ಸಂಬಂಧಗಳು. ಸತ್ಯವಾಗಲೂ ಈ ಊರಿನ ಮೇಲೆ ನನಗೆ ಬಹಳ ಕೃತಜ್ಞತೆಯಿದೆ.

ಯಾವಾಗಲಾದರೂ ಸಿನಿಮಾಕ್ಕೆ ಹೋಗುತ್ತಿದ್ದೆ. ಆದರೆ ಅದು ಒಂದು ದೊಡ್ಡ ಸಾಹಸ. ಎಂಟು ಮೈಲಿ ದೂರದಲ್ಲಿ ವಲಸೆ ಬಂದ ಯಾರೋ ಈ ಊರಿನಲ್ಲಿ ಒಂದು ಸಿನಿಮಾ ಥಿಯೇಟರ್ ಕಟ್ಟಿಸಿದ್ದರು. ಅದು ಇರುವುದು ಪುಟ್ಟದೊಂದು ಪಟ್ಟಣದಲ್ಲಿ, ಅಲ್ಲಿ ಪ್ರದರ್ಶನಗೊಳ್ಳುವ ಸಿನಿಮಾವನ್ನು ಒಮ್ಮೆ ಮಾತ್ರ ನೋಡಲಾರರು... ಪುನಃ ಪುನಃ ಕಂಡು ಅದನ್ನು ಮೂರುವಾರ ಓಡುವಂತೆ ಮಾಡುತ್ತಾರೆ ಪ್ರೇಕ್ಷಕರು.

ಕಪ್ಪನೆಯ ದೇಹದಲ್ಲಿ ಬಿಳಿಯ ಪಂಚೆಯಿಂದ ಹೊಸೆದ ಹಗ್ಗದಲ್ಲಿ ತೂಗುಹಾಕಿದ ಚೆಂಡೆಯಲ್ಲಿ ಬಡಬಡನೆ ಬಡಿಯುತ್ತಾ ಒಬ್ಬ ಸಣಕಲ ಮಲೆಯ, ಅದರ ಹಿಂದೆ ಇಬ್ಬದಿಗೂ ಸಿನಿಮಾ ಪೋಸ್ಟರನ್ನು ಹಚ್ಚಿದ ಭಿತ್ತಿಪತ್ರವನ್ನು ಹಿಡಿದು ಒಬ್ಬ ಡೊಳ್ಳುಹೊಟ್ಟೆಯ ನಂಬ್ಯಾರರು ನಡೆದು ಬರುತ್ತಿರುತ್ತಾರೆ. ವಿನೋದಕ್ಕಾಗಿ ಮತ್ತೊಂದು ವೇಷವೂ ಜೊತೆಗಿರುತ್ತದೆ. ಆದರೆ ಮಕ್ಕಳಿಗೆ ಹೆಚ್ಚು ಆಕರ್ಷಣೆಯ ಕೇಂದ್ರ ಬಿಂದು ನಂಬ್ಯಾರರ ಡೊಳ್ಳುಹೊಟ್ಟೆ. ವಿನೋದ ವೇಷಧಾರಿಯೂ ಕುತೂಹಲವನ್ನು ಕೆರಳಿಸುವಂತಿರುತ್ತಾನೆ. ಪರಮೇಶ್ವರನ ವೇಷಭೂಷಣ ಧರಿಸಿ ಭಿಕ್ಷಾಟನೆಗೆ ಬರುವ ಒಬ್ಬ ವೇಷಧಾರಿಯ ಕೈಯಲ್ಲಿ ಒಂದು ಆಮೆಯ ಚಿಪ್ಪಿರುತ್ತದೆ. ಮನೆಯವರು ಅದರಲ್ಲಿ ಅಕ್ಕಿ, ಮೆಣಸಿನ ಕಾಳುಗಳನ್ನು ಹಾಕುತ್ತಾರೆ. ತಲೆಯಲ್ಲಿ ಪರಮೇಶ್ವರನ ಕಿರೀಟ ಧರಿಸಿದರೆ ವಿನೋದ ವೇಷಧಾರಿ ಮಾತನಾಡಲಾರ. ಯಾವುದಾದರೂ ಮನೆಯವರು ಊಟಕ್ಕೆ ಕರೆದ ತಕ್ಷಣ ವೇಷಧಾರಿ ಕಿರೀಟವನ್ನು ಕಳಚಿ ಊಟ ಮಾಡಬಹುದು. ಆಗ ಮಾತೂ ಹೊರಬೀಳುತ್ತದೆ.

ಭಿತ್ತಿಪತ್ರವನ್ನು ಹಿಡಿದ ಹೊಟ್ಟೆ ನಂಬ್ಯಾರರ ಕೈಯಲ್ಲೊಂದು ಬಟ್ಟೆಯ ಚೀಲವಿರುತ್ತದೆ. ಅದರ ತುಂಬಾ ಹಸಿರು, ಹಳದಿ, ನೀಲಿ ಬಣ್ಣಗಳ ನೋಟೀಸುಗಳಿರುತ್ತವೆ. ನಾವು ಬೆಳೆದು ದೊಡ್ಡವರಾಗಿದ್ದೇವೆಂದು ಗೊತ್ತಾಗುವುದು ಈ ನೋಟೀಸು ಹಂಚುವವನ ಮೂಲಕವಾಗಿ. ಎಷ್ಟೇ ಗಿಂಜಿದರೂ ಮಕ್ಕಳಿಗೆ ನೋಟೀಸ್ ಕೊಡಲಾರ. ಆದರೆ ದೊಡ್ಡವರಿಗೆ ಕೈಗೆ ಸಿಕ್ಕಿದಷ್ಟು ಹಂಚುತ್ತಾನೆ. ಕೈಚಾಚದೆಯೇ ನೋಟೀಸ್ ನೀಡಿದ ಡೊಳ್ಳುಹೊಟ್ಟೆಯ ಉದಾರ ಮನಸ್ಸನ್ನು ಕಂಡಾಗಲೇ ನಾನು ಪ್ರೌಢನಾದೆ ಎಂದು ನನಗನ್ನಿಸಿದ್ದು. (ಸಶೇಷ)